ಏನಿರಬೇಕು ಎಂಬುದರ ಜೊತೆ ಸ್ನಾನಕ್ಕೆ ಬೇಕಾದ ನೀರಿನ ಬಿಸಿಯನ್ನೂ ಅಲ್ಗೊರಿದಂ ನಿರ್ಧರಿಸುತ್ತದೆ.

ಇಡೀ ಮನುಕುಲವನ್ನೇ ಒಂದು ಬೃಹತ್ ಡೇಟಾ ಪ್ರೊಸೆಸಿಂಗ್ ಸಿಸ್ಟಂನಂತೆ ಭಾವಿಸಿದರೆ, ಅದರಲ್ಲಿರುವ ನಾವು ಮಾಹಿತಿ ಸಂಗ್ರಹಿಸಿ, ಸಂಸ್ಕರಿಸಿ, ಹೊರ ಕಳಿಸುವ ಚಿಕ್ಕ ಚಿಕ್ಕ ಚಿಪ್‌ಗಳಿದ್ದಂತೆ. ಹೆಚ್ಚು ಹೆಚ್ಚು ಮಾಹಿತಿ ಸಿಕ್ಕಷ್ಟೂ ನಮ್ಮ ಕೆಲಸದ ಒತ್ತಡ ಏರುತ್ತದೆ. ಎಲ್ಲವನ್ನೂ ನಿರ್ವಹಿಸುವಷ್ಟು ಶಕ್ತಿ ಮೆದುಳಿಗೆ ಇಲ್ಲ. ದಿನವೊಂದಕ್ಕೆ ಇಂತಿಷ್ಟು ಗಂಟೆಯ ವಿಶ್ರಾಂತಿಯನ್ನದು ಬಯಸುವುದರಿಂದ ನಿರಂತರವಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ. ಆದರೆ ಕಂಪ್ಯೂಟರ್‌ಗಳಿಗೆ ಸುಸ್ತಾಗುವುದಿಲ್ಲ. ಅದರೊಳಗಿನ ಅಲ್ಗೊರಿದಂಗೆ ಅದು ಗೊತ್ತೇ ಇಲ್ಲ. ಅದು ಮಾಹಿತಿ ತಿನ್ನುವ ಬಕಾಸುರನಿದ್ದಂತೆ. ನೀಡುವ ಮಾಹಿತಿ ಹೆಚ್ಚಾದಷ್ಟೂ ಕೆಲಸ ಚೆನ್ನಾಗಿ ನಡೆದು ಫಲಿತಾಂಶ ಸರಿಯಾಗಿರುತ್ತದೆ.

### ಅಲ್ಗೊರಿದಂ ಏನು? ಏಕೆ? ಹೇಗೆ?

ಪ್ರತಿಯೊಂದನ್ನೂ ಪೂರ್ಣರೂಪಕ್ಕೇರಿಸುವುದೇ ಅಲ್ಗೊರಿದಂನ ಗುರಿ. ಮನುಷ್ಯನ ಗ್ರಹಿಕೆ ಮತ್ತು ನಿರ್ಣಯಗಳಿಗೆ ಜಾಗವಿಲ್ಲದ ತಾಣದಲ್ಲಿ ಅಲ್ಗೊರಿದಂ ದೊಡ್ಡ ಉಪಕಾರ ಮಾಡುತ್ತದೆ. ಮುಂದೆ ನಡೆಯುವ ಅಪರಾಧವನ್ನು ಇಂದೇ ಪತ್ತೆಮಾಡಲು ನೆರವಾಗುವ ಅಲ್ಗೊರಿದಂ ಲಭ್ಯವಾದರೆ ಬೇಡ ಎನ್ನುವ ಮರುಳುತನ ಯಾರಿಗಿದ್ದೀತು? ಹಲವು ಮಾದರಿ ಆಧರಿಸಿ ನಮ್ಮ ಆರೋಗ್ಯಸೇವೆ, ಕೊಳ್ಳುವಿಕೆ, ವಿದ್ಯಾಭ್ಯಾಸದ ಅವಕಾಶಗಳನ್ನು ಕರಾರುವಕ್ಕಾಗಿ ನಿರ್ಧರಿಸುವ ಅಲ್ಗೊರಿದಂ ಅತ್ಯುತ್ತಮ ಆಯ್ಕೆಗಳನ್ನು ನಮ್ಮ ಮುಂದಿಡುತ್ತದೆ. ಹಣ ಹೂಡಿಕೆ, ಸುಖಕರ ಹಾಗೂ ಕಡಿಮೆ ವೆಚ್ಚದ ವಿಮಾನ ಪ್ರಯಾಣ, ಹೆಲ್ತ್, ಶೇರು ಮಾರ್ಕೆಟ್ ಏರಿಳಿತದ ಸೂಚನೆ, ಅಪರಾಧ ನಿಯಂತ್ರಣಕ್ಕೆ ಬೇಕಾದ ಮಾಹಿತಿ – ಇಂಥ ಅನೇಕ ಚಟುವಟಿಕೆಗಳ ಕುರಿತು ನಾವೆಷ್ಟೇ ತಲೆಕೆಡಿಸಿಕೊಂಡರೂ ಅಲ್ಗೊರಿದಂಗಳು ನೀಡುವ ಸೂಚನೆ ನಮ್ಮ ಆಯ್ಕೆಗಳಿಗಿಂತ ಹಲವು ಪಟ್ಟು ಪರಿಣಾಮಕಾರಿಯಾಗಿರುತ್ತವೆ. ಉದಾಹರಣೆಗೆ, ನಾವು ಕಾರು ಅಥವಾ ವಿಮಾನ ನಡೆಸುತ್ತಿರುವಾಗ ನಮಗೆ ಹೃದಯಾಘಾತವಾಗಿ ನಿಯಂತ್ರಣ ತಪ್ಪಿದಾಗ, ಬ್ರೇಕ್ ಆಕ್ಟಿವೇಟ್ ಆಗಿ ಕಾರನ್ನು ನಿಲ್ಲಿಸುವುದು ಮತ್ತು ವಿಮಾನವನ್ನು ಆಟೊಪೈಲೆಟ್ ಮೋಡ್‌ಗೆ ಹಾಕಿ ಸುರಕ್ಷಿತವಾಗಿ ಇಳಿಸುವಲ್ಲಿ ಅಲ್ಗೊರಿದಂ ನೆರವಾಗುತ್ತದೆ.

ಆರೋಗ್ಯಕ್ಕೂ ಅನ್ವಯಿಸಬಲ್ಲ ಅಲ್ಗೊರಿದಂ ಇದ್ದರೆ ನಮಗೆ ಮುಂದಿನ ದಿನಗಳಲ್ಲಿ ಕ್ಯಾನ್ಸರ್, ಹೃದಯ, ಕಿಡ್ನಿ ಕಾಯಿಲೆ ಬರುತ್ತದೆ ಎಂಬುದು ತಿಳಿದರೆ ತಯಾರಿ ಮತ್ತು ಶುಶ್ರೂಷೆಯನ್ನು ಬೇಗನೇ ಪ್ರಾರಂಭಿಸಬಹುದಲ್ಲವೆ? ಹಾಗೆಯೇ ಮಳೆಸುರಿಸುವ ಮೋಡಗಳ ಅಲ್ಗೊರಿದಂ ಲಭ್ಯವಾದರೆ ಮಳೆಯ ಹಂಚಿಕೆ ಸರಿಯಾಗುತ್ತದೆಯಲ್ಲವೆ? ಬಿತ್ತಬೇಕಾದ ಹೊಲದ, ನೀರು ಕೂಡಿಡುವ ಅಣೆಕಟ್ಟಿನ, ಗೊಬ್ಬರ ದಾಸ್ತಾನಿನ ಉಗ್ರಾಣದ, ಬೆಳೆ ಶೇಖರಿಸುವ



## ಎಲ್ಲೆಲ್ಲೂ ಹಿಂಬಾಲಿಸುವ ಕಣ್ಣು

ಎಂಟು ವರ್ಷಗಳ ಹಿಂದೆ ಅಮೆರಿಕದ ಹೈಸ್ಕೂಲಿನಲ್ಲಿ ಓದುತ್ತಿದ್ದ ವಿದ್ಯಾರ್ಥಿನಿಯೊಬ್ಬಳಿಗೆ ಸಗಟು ಮಾರಾಟ ಕಂಪನಿ 'ಟಾರ್ಗೆಟ್'ನಿಂದ ಗರ್ಭಿಣಿಯ ಆರೋಗ್ಯಕ್ಕೆ ಸಂಬಂಧಿಸಿದ ವಿವಿಧ ಉಚಿತ ಕೂಪನ್‌ಗಳನ್ನು ಕಳಿಸಿತ್ತು. ಅದರಲ್ಲಿ ಬೇಬಿ ಪೌಡರ್, ಟವೆಲ್, ಹಾಲಿನ ಪೌಡರ್, ಗಿಲಿಗಿಲಿ ಆಟಿಕೆ, ಫೀಡಿಂಗ್ ಬಾಟಲ್ ಇತ್ಯಾದಿ ಕೂಪನ್‌ಗಳ ರಾಶಿಯೇ ಇತ್ತು. ಇದನ್ನು ಗಮನಿಸಿದ ವಿದ್ಯಾರ್ಥಿನಿಯ ತಂದೆ ಟಾರ್ಗೆಟ್ ಕಂಪನಿಗೆ ಬಂದು, ಹೈಸ್ಕೂಲು ಓದುವ ನನ್ನ ಮಗಳಿಗೆ ಅವಳನ್ನು ಗರ್ಭಿಣಿಯನ್ನಾಗಿಸಲು ಕೆಟ್ಟ ಪ್ರೇರಣೆ ನೀಡುತ್ತಿದ್ದೀರಿ ಎಂದು ಕೂಗಾಡಿದ. ಕಂಪನಿಯ ಅಧಿಕಾರಿ, 'ನಮ್ಮಿಂದ ತಪ್ಪಾಗಿದೆ, ಮುಂದೆ ಹಾಗಾಗುವುದಿಲ್ಲ' ಎಂದು ಹುಡುಗಿಯ ತಂದೆಯನ್ನು ಸಾಗಹಾಕಿದ. ಎರಡು ತಿಂಗಳು ಕಳೆದಿರಲಿಲ್ಲ, ಮತ್ತೆ ಆತ ಕಂಪನಿಯ ಸೂಪರ್‌ವೈಸರ್‌ನನ್ನು ಕಂಡು 'ತನ್ನ ಮಗಳು ಗರ್ಭಿಣಿಯಾಗಿದ್ದು ತನಗೇ ಗೊತ್ತಿರಲಿಲ್ಲ'ವೆಂದು ಹೇಳಿ, ಕಳೆದ ಸಲ ಬಂದಾಗ ಕೂಗಾಡಿ ರಂಪ ಮಾಡಿದ್ದಕ್ಕೆ ಕ್ಷಮೆ ಕೇಳಿದ.

ವೈದ್ಯಕೀಯ ಪರೀಕ್ಷೆ ಕೂಡ ಮಾಡದೇ ಆ ಹುಡುಗಿ ಗರ್ಭಿಣಿ ಎಂಬ ನಿರ್ಧಾರಕ್ಕೆ ಟಾರ್ಗೆಟ್ ಕಂಪನಿ ಬಂದಿದ್ದಾದರೂ ಹೇಗೆ? ಅಲ್ಲೊಂದು ಗುಟ್ಟಿದೆ. ಅವಳು ಗೂಗಲ್‌ನಲ್ಲಿ ಏನು ಹುಡುಕಿದ್ದಾಳೆ, ಫೇಸ್‌ಬುಕ್‌ನಲ್ಲಿ ಯಾರೊಂದಿಗೆ ಏನೇನನ್ನು ಚರ್ಚಿಸಿದ್ದಾಳೆ, ಇನ್‌ಸ್ಟಾಗ್ರಾಮ್ ಮೂಲಕ ಏನೇನು ಕಳಿಸಿದ್ದಾಳೆ, ಪಡೆದಿದ್ದಾಳೆ, ಮಾಲ್‌ಗಳಿಗೆ ಹೋದಾಗ ಏನೇನನ್ನು ನೋಡಿದ್ದಾಳೆ, ಮುಟ್ಟಿದ್ದಾಳೆ ಇತ್ಯಾದಿ ಡೇಟಾ ಸಂಸ್ಕರಣೆಯ ಮೂಲಕ ಅವಳಿಗೆ ಮುಟ್ಟು ನಿಂತಿದೆ ಎಂದು ಕಂಪನಿಗೆ ಗೊತ್ತಾಗಿತ್ತು. ಅವಳ ಶರೀರದ ಅಲ್ಗೊರಿದಂ ತನ್ನ ಕೆಲಸ ಮಾಡಿತ್ತು. ಅದು ಡೇಟಾ ದೇವರಿಗೆ ಗೊತ್ತಾಗಿತ್ತು.